**ದಿನಾಂಕಃ 27.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ: ಶ್ರೀ. ಎಂ.ಎನ್. ವಕೀಲರಿಂದಃ-</u>**

ಪ್ರತಿವಾದ ಪತ್ರದ ಷೆಡ್ಯೂಲ್ ಆಸ್ತಿಯಲ್ಲಿ ನಾನು ಮನೆಯನ್ನು ನಿರ್ಮಿಸಿದ್ದು ಅದರ ಮೇಲೆ ನಾನು ರೂಮನ್ನು ನಿರ್ಮಿಸಿರುವುದಿಲ್ಲ, ಶೀಟನ್ನು ಅಳವಡಿಸಿರುತ್ತೇನೆ. ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಿ ಇದೆಯೇ ನಿಮ್ಮ ಮನೆಯೇ ಎಂದು ಪ್ರಶ್ನಿಸಿದ್ದು ಸಾಕ್ಷಿ ಅದನ್ನು ನೋಡಿ ಅದು ನನ್ನ ಮನೆ ಎಂದು ಒಪ್ಪಿದ್ದರಿಂದ ಅದನ್ನು ನಿಪಿ.16 ಎಂದು ಗುರುತಿಸಲಾಯಿತು.

ನಿಪಿ.16 ರಲ್ಲಿ ಮನೆಯ ಮುಂದೆ ಕಾಣುವ ಚರಂಡಿಯನ್ನು ಚಪ್ಪಡಿ ಕಲ್ಲಿನಿಂದ ಮುಚ್ಚಲಾಗಿರುತ್ತದೆ ಎಂದರೆ ಸರಿ. ನನ್ನ ಮನೆಯ ಮುಂದಿನ ಗೋಡೆಯ ಸಮನಾಗಿ ಆ ಸಾಲಿನಲ್ಲಿ ಎಲ್ಲರು ಮನೆಯನ್ನು ನಿರ್ಮಿಸಿರುತ್ತಾರೆ ಎಂದರೆ ಸರಿ. ನಮ್ಮ ಮನೆಯ ಮುಂದೆ ಇರುವ ರಸ್ತೆಯು ಎಷ್ಟು ಅಡಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ನಿರ್ಮಿಸಿರುವ ಮನೆಯ ಮುಂಭಾಗದ ಗೋಡೆ ಚರಂಡಿಯ ಮೇಲೆ ಇರುತ್ತದೆ. ನಮ್ಮ ಮನೆಯ ಅಕ್ಕ-ಪಕ್ಕ ಸಾಲಿನ ಮನೆಯವರು ಸಹ ಚರಂಡಿಯ ಮೇಲೆ ಗೋಡೆಯನ್ನು ಹಾಕಿರುತ್ತಾರೆ. ಚರಂಡಿಯ ಮೇಲೆ ಗೋಡೆಯನ್ನು ಆಶ್ರಯ ಯೋಜನೆ ಅಡಿಯಲ್ಲಿ ನಿರ್ಮಿಸಿದ ಗೋಡೆಯಾಗಿರುವುದಿಲ್ಲ, ಅದನ್ನು ಇತ್ತೀಚೆಗೆ ನಾನು ನಿರ್ಮಿಸಿಕೊಂಡಿರುತ್ತೇನೆ. ಆಶ್ರಯ ಯೋಜನೆ ನನಗೆ ಮನೆಯನ್ನು ನಿರ್ಮಿಸಿಕೊಟ್ಟಾಗ ರಸ್ತೆಯಿಂದ 10 ಅಡಿ ಜಾಗವನ್ನು ಬಿಟ್ಟು 20x20 ರಡಿಯಲ್ಲಿ ಮನೆಯನ್ನು ನಿರ್ಮಿಸಿಕೊಂಡಿರುತ್ತಾರೆ. 10 ಅಡಿ ಜಾಗದಲ್ಲಿ ನಾನು ಪೆಟ್ಟಿಗೆ ಅಂಗಡಿಯನ್ನು ಇಟ್ಟುಕೊಂಡಿದ್ದೆ. ನಾನು 10 ಅಡಿ ಜಾಗದಲ್ಲಿ ಪೆಟ್ಟಿಗೆ ಅಂಗಡಿಯನ್ನು ಇಟ್ಟುಕೊಳ್ಳಲು ಮೊದಲು ಪರವಾನಿಗೆಯನ್ನು ತೆಗೆದುಕೊಂಡಿದ್ದೆ. ಈಗ ತೆಗೆದುಕೊಂಡಿಲ್ಲ. ಸದರಿ ದಾಖಲಾತಿಗಳು ನನ್ನ ಬಳಿ ಈಗ ಇರುವುದಿಲ್ಲ. ಪೆಟ್ಟಿಗೆ ಅಂಗಡಿಯನ್ನು ತೆರವು ಮಾಡಿ ಸದರಿ ಜಾಗದಲ್ಲಿ ಪುನಃ ನಾನು ಮನೆಯನ್ನು ನಿರ್ಮಿಸಲು ಪರವಾನಿಗೆಯನ್ನು ಪಡೆದುಕೊಂಡಿಲ್ಲ.ಸಾಮಾನ್ಯವಾಗಿ ಮುನಿಸಿಪಾಲಿಟಿಯವರು ಪರವಾನಿಗೆಯನ್ನು ನೀಡುವಾಗ ಚರಂಡಿಯಿಂದ 03 ಅಡಿ ಜಾಗವನ್ನು ಬಿಟ್ಟು ನಂತರ ಮನೆಯನ್ನು ಕಟ್ಟಿಕೊಳ್ಳಲು ಪರವಾನಿಗೆಯನ್ನು ನೀಡುತ್ತಾರೆ ಎಂದರೆ ಸರಿ. ನಾನು ಚರಂಡಿಯ ಮೇಲೆ ಗೋಡೆಯನ್ನು ಕಟ್ಟಿರುವುದನ್ನು ಮುನಿಸಿಪಾಲಿಟಿಯವರು ನೋಡಿದರು

ಕೇಳಿರುವುದಿಲ್ಲ, ಹಾಗಾಗಿ ಸುಮ್ಮನಿದ್ದೆ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಿ ಛಾಯಾಚಿತ್ರದಲ್ಲಿ ಕಾಣುವ ಮನೆಯು ನನ್ನ ಮನೆಯ ಹಿಂದಿನ ಛಾಯಾಚಿತ್ರವಾಗಿರುತ್ತದೆ ಎಂದರೆ ಸರಿ ಎಂದು ಒಪ್ಪಿದ್ದು. ಅದರ ಪಶ್ಚಿಮಕ್ಕೆ ವೇದಾವತಿಯವರ ಮನೆ ಬರುತ್ತದೆ ಎಂದರೆ, ಸಾಕ್ಷಿ ಸರಿ ಎಂದು ಒಪ್ಪಿದ್ದರಿಂದ ಸದರಿ ಛಾಯಾಚಿತ್ರವನ್ನು ನಿಪಿ.17 ಎಂದು ಗುರುತಿಸಲಾಯಿತು. ನಿಪಿ.17ರ ಛಾಯಾಚಿತ್ರದಲ್ಲಿ ಕಾಣುವ ಚರಂಡಿಯು 2ವರೆ ಅಡಿ ಅಗಲ ಇರುತ್ತದೆ. ಸದರಿ ಚರಂಡಿಯು ಸುಮಾರು 60ಅಡಿ ಉದ್ದವಿದ್ದು ಬರೋಂದು ಚರಂಡಿಗೆ ಸೇರಿಕೊಳ್ಳುತ್ತದೆ. ನನ್ನ ಮನೆ ಗೋಡೆ ಮತ್ತು ವೇದಾವತಿಯವರ ಮನೆ ಗೋಡೆ ಒಂದೇ ಸಮನಾಗಿದ್ದು ಅದೇ ರೀತಿ ಅಕ್ಕ-ಪಕ್ಕದ ಸಾಲಿನ ಗೋಡೆಗಳು ನಮ್ಮ ಮನೆಗಳ ಗೋಡೆಗಳಂತೆ ಸಮನಾಗಿರುತ್ತದೆ ಎಂದರೆ ಸರಿ. ನಿಪಿ.17ರ ಛಾಯಾಚಿತ್ರ ಕಾಣುವ ಚರಂಡಿಗೆ ಹೊಂದಿಕೊಂಡಂತೆ ಮುನಿಸಿಪಾಲಿಟಿಯವರು ನನಗೆ ಆಶ್ರಯ ಯೋಜನೆ ಅಡಿ ನನಗೆ ಮನೆಯನ್ನು ನಿರ್ಮಿಸಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಮೊದಲು ಚರಂಡಿ ಇರಲಿಲ್ಲ, ನಾವು ಚರಂಡಿಯನ್ನು ಈಗ ನಿರ್ಮಿಸಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಈ ಮೇಲೆ ಹೇಳಿದ ವಿಚಾರಗಳನ್ನು ನಾನು ನನ್ನ ಪ್ರತಿವಾದ ಪತ್ರದಲ್ಲಾಗಲಿ, ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ತದಲ್ಲಾಗಲಿ ತಿಳಿಸಿರುವುದಿಲ್ಲ.

ನನ್ನ ಹೆಂಡತಿಯಾದ ಪಂಕಜರವರು ಕಡೂರಿನ ಮೂರನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ-265/2022ರಂತೆ ಈ ದಾವೆಯ ವಾದಿಯರ ವಿರುದ್ಧ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ತಿಳಿಸಿದ ವಾದ ಪತ್ರದ ಅಂಶವನ್ನು ನಾನು ತಿಳಿದುಕೊಂಡಿರುತ್ತೇನೆ. ನಾನು ಈ ಪ್ರಸ್ತುತ ದಾವೆಯಲ್ಲಿ ನಮೂದಿಸಿರುವ ಚಕ್ಕುಬಂದಿಯನ್ನೇ ನನ್ನ ಹೆಂಡತಿ ಹಾಕಿದ ದಾವೆಯಲ್ಲಿಯೂ ಅದೇ ಚಕ್ಕುಬಂದಿಯನ್ನು ನಮೂದಿಸಿರುತ್ತಾರೆ.

ನಿಪಿ.17ರ ಛಾಯಾಚಿತ್ರದಲ್ಲಿ ಕಾಣುವ ಚರಂಡಿಯ ನಂತರದ ಜಾಗದಲ್ಲಿ ನನಗೆ ಯಾವುದೇ ಹಕ್ಕು, ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಚರಂಡಿಯನ್ನು ನಾನು ನಿರ್ಮಿಸಿಕೊಂಡಿರುತ್ತೇವೆ. ಅದರ ನಂತರದ ಜಾಗವೂ ನನಗೆ

ಸೇರಿದ್ದಾಗಿರುತ್ತದೆ ಎಂದು ನುಡಿಯುತ್ತಾರೆ. ಯಾರಾದರು ಒಂದು ನಿವೇಶನವನ್ನು ಖರೀದಿಸಿದರೆ ಅದರ ಸುತ್ತಲು ಚರಂಡಿ ಮಾಡಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ನಮ್ಮ ನಿವೇಶನದ ಮಧ್ಯದಲ್ಲಿ ಯಾರಾದರು ಚರಂಡಿ ನಿರ್ಮಿಸಿಕೊಳ್ಳುತ್ತಾರೇಯೇ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಅರ್ಧ ನಿವೇಶನದಲ್ಲಿ ಮನೆಯನ್ನು ನಿರ್ಮಿಸಿಕೊಂಡಿದ್ದು ಅದು ಮಳೆ ನೀರಿನಿಂದ ಹಾಳಾಗುತ್ತದೆ ಎಂದು ಮತ್ತು ನಮ್ಮ ಮನೆಯ ತಗ್ಗಿನ ಪ್ರದೇಶದಲ್ಲಿ ಇರುವುದರಿಂದ ಅಕ್ಕ-ಪಕ್ಕ ಚರಂಡಿ ನೀರು ನಮ್ಮ ಮನೆಯ ಗೋಡೆಯ ಬಳಿ ಬರುತ್ತಿದ್ದು, ಆದ್ದರಿಂದ ಮನೆಯನ್ನು ರಕ್ಷಿಸಿಕೊಳ್ಳಲು ನಾನು ಚರಂಡಿಯನ್ನು ಇತ್ತೀಚೆಗೆ ನಿರ್ಮಿಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಅಕ್ಕ-ಪಕ್ಕದವರು ಸಹ ಅವರ ಮನೆಗೆ ತೊಂದರೆ ಆಗುತ್ತದೆ ಎಂದು ಚರಂಡಿಯನ್ನು ಮುಂದುವರೆಸಿರುತ್ತಾರೆ.

ನನಗೆ ಸೇರಿದ ನಿವೇಶನ ಎಷ್ಟು ಇದಿಯೋ ಅಷ್ಟೇ ಅಳತೆಯ ನಿವೇಶನ ವೇದಾವತಿಯವರಿಗೂ ಸಹ ಇರುತ್ತದೆ. ವೇದವತಿಯವರ ಮನೆಯ ದಕ್ಷಿಣ ಭಾಗದಲ್ಲಿ ಹುಚ್ಚಣ್ಣರವರ ಮನೆ ಮತ್ತು ಹಿತ್ತಲು ಇರುತ್ತದೆ ಎಂದರೆ ಸಾಕ್ಷಿಯು ಮೊದಲು ಹಿತ್ತಲು ಇದ್ದು, ನಂತರ ಮನೆ ಇರುತ್ತದೆ ಎಂದು ನುಡಿಯುತ್ತಾರೆ. ನಿಡಿ.2 ರ ಕ್ರಯ ಪತ್ರದಲ್ಲಿ ನಮೂದಿಸಿರುವಂತೆ ಚಕ್ಕುಬಂದಿಯಲ್ಲಿ ದಕ್ಷಿಣ ದಿಕ್ಕಿಗೆ ಹುಚ್ಚಣ್ಣನವರ ಮನೆ ಮತ್ತು ಹಿತ್ತಲು ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಡಿ.2 ರ ಕ್ರಯ ಪತ್ರದಲ್ಲಿ ನಮೂದಿಸಿರುವ ಚಕ್ಕುಬಂದಿಯ ಪ್ರಕಾರ ಸದರಿ ಆಸ್ತಿನಯು ವೇದವಾತಿಯವರಿಗೆ ಸೇರಿದ್ದಾಗಿರುತ್ತದೆ ಎಂದರೆ ಸರಿಯಲ್ಲ.

ನಿಡಿ.2 ರ ಕ್ರಯಪದಲ್ಲಿರುವ ಚಕ್ಕುಬಂದಿಯನ್ನು ನನ್ನ ಹೆಂಡತಿ ಸಲ್ಲಿಸಿರುವ ದಾವೆಯ ದಾವಾ ಪತ್ರದಲ್ಲಿ ಅಂದರೆ ನಿಡಿ.1 ರಲ್ಲಿ ನಮೂದಿಸಲಾಗಿರುತ್ತದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ನಮೂದಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿಡಿ.1 ರಲ್ಲಿ ನಿಡಿ.2 ರಲ್ಲಿರುವ ಕ್ರಯ ಪತ್ರದ ಚಕ್ಕುಬಂದಿಯನ್ನು ನಮೂದಿಸಲಾಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಕಾರ ನಾನು ಕ್ರಯಕ್ಕೆ ಪಡೆದಿರುವ ನಿವೇಶನದ ಚಕ್ಕುಬಂದಿಯು ನಾನು ಈ ದಾವೆಯ ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ಚಕ್ಕುಬಂದಿ ಎರಡೂ ಒಂದೇ ಆಗಿರುತ್ತದೆ. ನನ್ನ ಪ್ರತಿವಾದ ಪತ್ರದಲ್ಲಿ ದಕ್ಷಿಣ ದಿಕ್ಕಿಗೆ ಮುನಿಸಿಪಾಲಿಟಿ (ಓಣಿ) ರಸ್ತೆ, ನಂತರ ರಾಮಣ್ಣ/ಸಾವಿತ್ರಮ್ಮರವರ ಆಸ್ತಿ ಬರುತ್ತದೆ ಎಂದು ನಮೂದಿಸಲಾಗಿರುತ್ತದೆ

ಎಂದರೆ, ಸಾಕ್ಷಿಯು ನಮ್ಮ ಮನೆಯ ಹಿಂದೆ 10 ಅಡಿ ಜಾಗ ಬಂದು ನಂತರ ಓಣಿ ಬಂದು ನಂತರ ವಾದಿಯ ಮನೆ ಬರುತ್ತದೆ ಎಂದು ನುಡಿಯುತ್ತಾರೆ. ಆದರೆ ನನ್ನ ಕ್ರಯ ಪತ್ರದಲ್ಲಿ ದಕ್ಷಿಣಕ್ಕೆ ಹುಚ್ಚಣ್ಣನ ಮನೆ ಮತ್ತು ಹಿತ್ತಲು ಹಾಗೂ ಇ-ಖಾತೆಯಲ್ಲೂ ಸಹ ಸದರಿ ಚಕ್ಕುಬಂದಿ ನಮೂದು ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಅದು ತಪ್ಪಾಗಿ ನಮೂದಾಗಿರಬಹುದು, ಆದರೆ ನಾನು ನನ್ನ ತಕರಾರಿನಲ್ಲಿ ತಿಳಿಸಿರುವ ಚಕ್ಕುಬಂದಿ ಸರಿಯಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ಚಕ್ಕುಬಂದಿಯನ್ನು ಸಾಭೀತುಪಡಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ, ಅಂತಹ ದಾಖಲಾತಿಗಳು ನನ್ನ ಬಳಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಬಳಿ ದಾಖಲಾತಿಗಳು ಇಲ್ಲದೆ ಇರುವುದರಿಂದಲೇ ನಾನು ಸುಳ್ಳು ಹೇಳಿಕೊಂಡು ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ಚಕ್ಕುಬಂದಿಯಂತೆ ಯಾವುದೇ ಆಸ್ತಿ ಅಸ್ಥಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದ ಪತ್ರದ ಷೆಡ್ಯೂಲ್ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಮತ್ತು ನಂತರದಲ್ಲಿ ನಾನು ಖರೀದಿಸಿದ ಆಸ್ತಿಯನ್ನು ಅಳತೆ ಮಾಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಅಸ್ತಿಯನ್ನು ಅಳತೆ ಮಾಡಿಸಲು ಬಂದವರನ್ನು ವಾದಿಯರು ಬಿಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಮುನಿಸಿಪಾಲಿಟಿಗೆ ನಾನು ಖರೀದಿಸಿದ ಆಸ್ತಿಯನ್ನು ಅಳತೆ ಮಾಡಿಸಲು ಈಗ್ಗೆ ಐದು ವರ್ಷಗಳ ಹಿಂದೆ ಅರ್ಜಿಯನ್ನು ಸಲ್ಲಿಸಿದ್ದೆ. ಸದರಿ ಅರ್ಜಿ ನನ್ನ ಬಳಿ ಇರುವುದಿಲ್ಲ. ನಾನು ಎಂದಿಗೂ ನನ್ನ ಆಸ್ತಿಯನ್ನು ಅಳತೆ ಮಾಡಿಸಲು ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿಯವರ ಅಳತೆ ಮಾಡಲು ಬಂದವರಿಗೆ ಹೆದರಿಸಿ ಕಳುಹಿಸಿದ್ದು, ಅವರ ಮೇಲೆಯೇ ವಾದಿಯವರು ದಾವೆಯನ್ನು ಹಾಕಿರುತ್ತಾರೆ ಎಂದು ನುಡಿಯುತ್ತಾರೆ.

ನಾನು ನನ್ನ ಆಸ್ತಿಯನ್ನು ಈವರೆಗೆ ಅಳತೆ ಮಾಡಿಸದೇ ಇರುವುದರಿಂದಲೇ ನಾನು ಎಷ್ಟು ಅಡಿ ಜಾಗದಲ್ಲಿ ಮನೆಯನ್ನು ನಿರ್ಮಿಸಿರುತ್ತೇನೆ, ಎಷ್ಟರಲ್ಲಿ ಸ್ವಾಧೀನದಲ್ಲಿ ಇರುತ್ತೇನೆ ಎಂದು ನನಗೆ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಆಸ್ತಿಯನ್ನು ಮತ್ತು ವಾದಿಯರ ಆಸ್ತಿಯನ್ನು ನ್ಯಾಯಾಲಯದ ಮೂಲಕ ಅಳತೆ ಮಾಡಿಸಲು ನನಗೆ ಯಾವುದೇ

ತೊಂದರೆ ಇರುವುದಿಲ್ಲ. ವಾದಿಯರ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ವಾದಿಯರಿಗೆ ನಾನು ತೊಂದರೆ ನೀಡುತ್ತಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಆಸ್ತಿಯಲ್ಲಿ ವಾದಿಯರಿಗೆ ಹಕ್ಕು ಇರುವುದಿಲ್ಲ ಎಂದರೆ ಸರಿ. ಹಾಗೆಯೇ ವಾದಿಯರ ಆಸ್ತಿಯಲ್ಲಿ ನನಗೂ ಕೂಡ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಮುನಿಸಿಪಾಲಿಟಿಯವರು ಸಾಮಾನ್ಯವಾಗಿ ಖಾತೆ ಮಾಡಿಕೊಡುವಾಗ ಸ್ಥಳ ಪರಿಶೀಲನೆ ಮಾಡಿ ಅಳತೆ ಮಾಡಿ ನಂತರ ಖಾತೆ ನೀಡುತ್ತಾರೆ ಎಂದರೆ ಸರಿ. ಅದೇ ರೀತಿ ನನ್ನ ಆಸ್ತಿಯನ್ನು ಮುನಿಸಿಪಾಲಿಟಿಯವರು ಅಳತೆ ಮಾಡಿ ಖಾತೆ ಇಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅಳತೆ ಮಾಡಲು ಬಂದಾಗಿ ವಾದಿಯವರು ತೊಂದರೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ವಾದಿಗಳಿಗೆ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ವಾದಿಗಳಿಗೆ ದಾವಾ ಸ್ವತ್ತು ಪಿತ್ರಾರ್ಜಿತ ಆಸ್ತಿಯಾಗಿರುವುದರಿಂದ ನಾನು ನಿವೇಶನಮ್ನ ಖರೀದಿಸುವ ಮೊದಲೇ ವಾದಿಗಳು ಸ್ವಾಧೀನದಲ್ಲಿ ಇದ್ದರು ಎಂದರೆ ಸರಿ. ನನಗೆ ಮತ್ತು ನನ್ನ ಹೆಂಡತಿಗೆ ಸದರಿ ವಿಚಾರಗಳು ಗೊತ್ತಿದ್ದರು ಸಹ ವಾದಿಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ನನ್ನ ಹೆಂಡತಿಯೊಂದಿಗೆ ಸುಳ್ಳು ಅಂಶಗಳೊಂದಿಗೆ ಸುಳ್ಳು ದಾವೆಯನ್ನು ಹಾಕಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ಸಹ ಸುಳ್ಳು ಅಂಶಗಳೊಂದಿಗೆ ನನ್ನ ಪ್ರತಿವಾದ ಪತ್ರವನ್ನು ಸಲ್ಲಿಸಿ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(2 ನೇ ಪ್ರತಿವಾದಿಪರ ವಕೀಲರು ಡಿ.ಡಬ್ಲ್ಯೂ.1 ರವರನ್ನು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು ಕಡೂರು.